# ನಟ ಆಗಬೇಕೆಂದರಷ್ಟೇ ಸಾಕೆ?



ರಾಹುಲ್
ಉದಯದ
'ಯಾರಿವಳು'
ನಿಖಿಲ್

◆ **ನಿಮ್ಮ ಪರಿಚಯವನ್ನು ಹೇಳಿ...**

10ನೇ ತರಗತಿಯಲ್ಲಿ ಇದ್ದಾಗಲೇ ಮಂಗಳೂರಿನ ದೇವದಾಸ್ ಕಾಪಿಕಾಡ್ ಅವರ ರಂಗತಂಡದಲ್ಲಿ ಗುರುತಿಸಿಕೊಂಡೆ. ನಂತರ. 'ಸ್ಟ್ಯಾಂಡ್ ಅಪ್ ಕಾಮಿಡಿ' ಶೋ ನೀಡುತ್ತಿದ್ದೆ. ಹಾಗಿದ್ದಾಗ ತುಳು ಸಿನಿಮಾದಲ್ಲಿ ಪುಟ್ಟ ಪಾತ್ರಕ್ಕೆ ಅವಕಾಶ ಸಿಕ್ಕಿತು. ಮತ್ತೊಂದು ತುಳು ಸಿನಿಮಾಕ್ಕೆ ನಾಯಕನಾಗಿದೆ. ಎಂ.ಎ. ಜಯಂತ್ ಬೆಂಗಳೂರಿಗೆ ಸಿನಿಮಾ ಮಾಡಲು ನನ್ನನ್ನು ಕರೆದರು. ಅದು ಅರ್ಧಕ್ಕೆ ನಿಂತಿತು. ಕೂಡಲೇ ತುಳು ಸಿನಿಮಾ ಮಾಡಲು ಮತ್ತೆ ಮಂಗಳೂರಿಗೆ ಕರೆದುಕೊಂಡು ಹೋದರು. 'ಏಸಾ' ತುಳು ಸಿನಿಮಾದಲ್ಲಿ ನಾಯಕನಾಗಿ ಅಭಿನಯಿಸಿದೆ. ಅದು ನನಗೆ ಒಳ್ಳೆಯ ಹೆಸರು ತಂದುಕೊಟ್ಟಿತು. ನಂತರ ಉದಯದಲ್ಲಿ 'ಅರಮನೆ' ಧಾರಾವಾಹಿಯ ಮೂಲಕ ಕನ್ನಡಕ್ಕೆ ಬಂದೆ. ನಂತರ 'ಪ್ರಾಯಶಃ' ಮತ್ತು 'ವಾರುಣಿ' ಸಿನಿಮಾ ಮಾಡಿದೆ. ಅವು ಬಿಡುಗಡೆ ಆಗಬೇಕಿದೆ. ತುಳು ಮತ್ತು ಕನ್ನಡ ದ್ವಿಭಾಷೆಯ ಒಂದು ಸಿನಿಮಾವನ್ನು ನಾನೇ ನಿರ್ದೇಶನ ಮಾಡಿದೆ. ಈಗ 'ಯಾರಿವಳು' ಅವಕಾಶ ಸಿಕ್ಕಿತು.

◆ **ಸಿನಿಮಾ– ಧಾರಾವಾಹಿಯ ಅನುಭವ ಹೇಳುವುದಾದರೆ...**

ಇವೆರಡರ ನಡುವೆ ಅಜಗಜಾಂತರ ವ್ಯತ್ಯಾಸ ಇದೆ. ಧಾರಾವಾಹಿಗೆ ಪ್ರತಿದಿನ ಇಷ್ಟು ಸೀನ್ ಕಳಿಸಬೇಕು, ಬ್ಯಾಂಕಿಂಗ್ ಇರಬೇಕು ಎನ್ನುವ ಸವಾಲು ಇರುತ್ತದೆ. ಆ ವೇಗದ ಕಾರಣಕ್ಕೆ ಕೆಲವೊಮ್ಮೆ ಹೊಂದಾಣಿಕೆಯನ್ನೂ ಮಾಡಿಕೊಳ್ಳುತ್ತೇವೆ. ಸಿನಿಮಾದಲ್ಲಿ ಆ ರೀತಿ ಆಗುವುದೇ ಇಲ್ಲ. ಯಾವುದೇ ಒಂದು ದೃಶ್ಯ ಇದೇ ರೀತಿ ರೂಪಿಸಬೇಕು ಅಂದರೆ ಹಾಗೆಯೇ ಮಾಡುತ್ತೇವೆ. ಒಂದು ವೇಳೆ ಸಮಯ ಮೀರಿದ್ದರೂ ಮತ್ತೊಂದು ದಿನ ಅದಕ್ಕಾಗಿ ಮೀಸಲಿಡುತ್ತೇವೆ. ಸಿನಿಮಾ ಮುಗಿದ ನಂತರವೇ ಬಿಡುಗಡೆ ಆಗುತ್ತದೆ. ಟೀವಿಯಲ್ಲಿ ಸಮಯದ ಮಿತಿ ಹೆಚ್ಚಿರುತ್ತದೆ. ನಟನೆ ಮತ್ತು ನಿರ್ಮಾಣದಲ್ಲಿಯೂ ಭಿನ್ನತೆ ಎದ್ದು ಕಾಣಿಸುತ್ತದೆ. ಸಿನಿಮಾದಿಂದ ಧಾರಾವಾಹಿಗೆ ಬಂದ ತಕ್ಷಣ ಹೊಂದಾಣಿಕೆಗೆ ಸ್ವಲ್ಪ ಸಮಯ ನನಗೂ ಬೇಕಾಗುತ್ತದೆ. ಎರಡೂ ಕೂಡ ಅಭಿನಯ ಎಂಬ ಬಿಲ್ವಿದ್ಯೆಯ ಜ್ಞಾನ ಬಾಣಗಳು. ನಟನಾಗಿ ಆ ಬಾಣಗಳನ್ನು ಗಳಿಸಿ ತನ್ನ ಬತ್ತಳಿಕೆಯಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದರೆ. ಸಮಯಕ್ಕೆ ಬೇಕಾಗುವ ಬಾಣವನ್ನು ಬಿಲ್ಲಿಗೇರಿಸಬಹುದು.

◆ **ಹೊಸ ಪಾತ್ರದ ಆಯ್ಕೆಗೆ ನಿಮ್ಮ ಮಾನದಂಡ ಏನು?**

ಎಲ್ಲ ರೀತಿಯ ಪಾತ್ರವನ್ನು ಮಾಡಬೇಕು ಎನ್ನುವ ಆಸೆ ಇದೆ. ಇದೇ ರೀತಿಯ ಪಾತ್ರ ಎನ್ನುವ ನಿರ್ದಿಷ್ಟತೆಯಿಲ್ಲ. ಯಾವುದೇ ಪಾತ್ರ ಎದುರಾದರೆ ಸವಾಲೆಂದೇ ಸ್ವೀಕರಿಸುತ್ತೇನೆ. ಒಬ್ಬ ಒಂದು ಪಾತ್ರವನ್ನು ಮಾಡಿದಂತೆ ಮತ್ತೊಬ್ಬ ಮಾಡುವುದಿಲ್ಲ. ನಟ ಎಂದರೆ ನಿರ್ದೇಶಕ ಏನು ಹೇಳುತ್ತಾನೆಯೋ ಅದನ್ನು ಪ್ರತಿಬಿಂಬಿಸುವವನು. ನನಗೆ ಎಲ್ಲ ರೀತಿಯ ಪಾತ್ರವನ್ನು ನಿರ್ವಹಣೆ ಮಾಡಬೇಕು ಎನ್ನುವ ಆಸೆಯಿದೆ. 'ಅರಮನೆ'ಯಲ್ಲಿ ಮಾಡಿದ ಆರ್‌ಜೆ ಅವಿನಾಶ್ ಪಾತ್ರ ಎಂದೂ ಮರೆಯಲು ಸಾಧ್ಯವಿಲ್ಲ. ಆ ಮೂಲಕ ಜನರ ಪ್ರೀತಿಯೂ ಅಪಾರವಾಗಿ ಸಿಕ್ಕಿದೆ. ಆ ಪಾತ್ರವನ್ನು ಮಿಸ್ ಮಾಡಿಕೊಂಡೆ ಎಂದೆನಿಸುತ್ತದೆ.

◆ **ಅಭಿಮಾನಿಗಳ ಬೇಕು ಬೇಡಗಳಿಗೆ ಹೇಗೆ ಸ್ಪಂದಿಸುತ್ತೀರಿ?**

ಸಾಮಾಜಿಕ ಮಾಧ್ಯಮಗಳಲ್ಲಿ ಸಾಧ್ಯವಾದಷ್ಟು ಪ್ರತಿಕ್ರಿಯೆಯನ್ನು ನೀಡುತ್ತೇನೆ. ಅಭಿಮಾನದಿಂದ ಕೇಳಿದ ಪ್ರಶ್ನೆಗೆ ಉತ್ತರ ಸಿಗದಿದ್ದರೆ ಬೇಸರ ಮಾಡಿಕೊಳ್ಳುತ್ತಾರೆ. ಅವರಿಗೆ ನೋವು ಮಾಡುವ ಉದ್ದೇಶ ಇರುವುದಿಲ್ಲ. ಸಾಧ್ಯವಾದಮಟ್ಟಿಗೆ ಎಲ್ಲರಿಗೂ ಪ್ರತಿಕ್ರಿಯೆ ನೀಡುತ್ತೇನೆ. ಕೆಲವೊಮ್ಮೆ ಆಗದಿದ್ದರೆ, ಅವರು ಬೈಯುತ್ತಾರೆ. ತಕ್ಷಣ ಅದಕ್ಕೆ ಕ್ಷಮೆ ಕೋರಿ ಉತ್ತರಿಸುತ್ತೇನೆ. ಪ್ರತ್ಯಕ್ಷವಾಗಿ ಭೇಟಿಯಾದಾಗ ಬೇಕಾದಷ್ಟು ಸೆಲ್ಫಿಯನ್ನು ತೆಗೆದುಕೊಳ್ಳಲು ಸಮಯಾವಕಾಶ ಕೊಡುತ್ತೇನೆ. ನನ್ನ ಎಲ್ಲ ಕೆಲಸಗಳಿಗಿಂತ ಅವರ ಬಯಕೆಯೇ ಮೊದಲ ಆದ್ಯತೆ ಎಂದೇ ಭಾವಿಸುವೆ.

ತುಂಬ ಜನ ನಟನೆಯ ಬಗ್ಗೆ ಟಿಪ್ಸ್ ಕೇಳುತ್ತಾರೆ. ನಾನೂ ನಟ ಆಗಬೇಕು ಎಂದರಷ್ಟೇ ಸಾಲದು. ಮನಸಿನ ಆ ತುಮುಲಕ್ಕೆ ಒಂದಿಷ್ಟು ಕೆಲಸ ಮಾಡಬೇಕು. ಯಾರೇ ಆದರೂ ನನಗೆ ಏಕೆ ಅವಕಾಶ ನೀಡಬೇಕು ಎನ್ನುವುದಕ್ಕೆ ಸಮರ್ಥನೆಯನ್ನು ನೀಡುವಷ್ಟು ತಯಾರಿ ಮಾಡಿಕೊಂಡಿರಬೇಕು. ಒಳ್ಳೆಯ ಫೋಟೊಗಳನ್ನು ಇಟ್ಟುಕೊಂಡಿರಬೇಕು. ನಮ್ಮದೇ ಕಲ್ಪನೆಯ ಪುಟ್ಟ ಪುಟ್ಟ ದೃಶ್ಯಗಳಿಗೆ ಜೀವ ತುಂಬಿದ ವಿಡಿಯೊ ಮಾಡಿಕೊಂಡಿರಬೇಕು. ಆಗ ನನಗೊಂದು ಅವಕಾಶ ಕೊಡಿ ಎಂದು ಕೇಳಬಹುದು. ನಮ್ಮ ಬಗ್ಗೆ ಅದು ವಿಶ್ವಾಸವನ್ನೂ ಮೂಡಿಸುತ್ತದೆ. ಒಬ್ಬ ನಿರ್ದೇಶಕ/ನಿರ್ಮಾಪಕ ನಟ ಆಗಬೇಕು ಎಂದು ಬಂದವನ ಮೇಲೆ ಹೇಗೆ ಭರವಸೆಯನ್ನು ಇಟ್ಟುಕೊಳ್ಳುತ್ತಾನೆ. ನನ್ನನ್ನು ಕೇಳಿದವರಿಗೂ ಇದ್ದನ್ನೇ ಹೇಳುವುದು. ಸಿದ್ಧತೆ ಮಾಡಿಕೊಂಡವರನ್ನು ಗೊತ್ತಿದ್ದವರಿಗೆ ಪರಿಚಯಿಸುತ್ತೇನೆ. ತುಂಬ ಜನ ನಟಿಸುವ ಆಸೆಯನ್ನು ತೋರಿಸಿಕೊಂಡಿದ್ದಾರೆ. ಏನಾದರೂ ಮಾಡಿ ಕಳಿಸಿ ಎಂದರೆ ಸಾಕಷ್ಟು ಜನ ಅದನ್ನು ಮಾಡಿಲ್ಲ.

■ **ರಾಘವೇಂದ್ರ ಕೆ.**